ಅಧ್ಯಕ್ಷರು.—ಉತ್ತರ ಹೇಳಲಿಕ್ಕೆ ಟೈಮ್ ಬೇಕು ಎಂದರು ಹೇಳಿದರು.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ತರಹ ಅವರು ಹೇಳಿದ್ದನ್ನೇ ನೀವು ಕೇಳುತ್ತಿದ್ದೀರಿ. ಸದಸ್ಯರ ಹಕ್ಕಿನ ಪ್ರಶ್ನೆ ಏನಾಗಬೇಕು ಎಂದು ಕೇಳುತ್ತಿದ್ದೇನೆ. Is it a small question ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಯಾವ ರೂಲ್ ಎಂದು ಹೇಳುತ್ತೇನೆ ಈ ಸದನದಲ್ಲಿ ಪ್ರಶ್ನೆ ಬಂದಾಗ ಆಮೇಲೆ ತೆಗೆದುಕೊಳ್ಳಿ, ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನೋಡೋಣ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಯಾವಾಗನೋಡುತ್ತೀರಿ ? ಶಾಸಕರ ಭ್ರಷ್ಟಾಚಾರದ ಬಗ್ಗೆ... ...I am very sorry.

(ಗೊಂದಲ)

ಅಧ್ಯಕ್ಷರು.—ಉತ್ತರ ಕೊಡುವುದಕ್ಕೆ ಟೈಮ್ ಕೇಳಿದ್ದರು, ಟೈಮ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯು ಮುಂದಿಡಲಾಗುವ ಕಾಗದಪತ್ರಗಳು. He has asked for some time. I have permitted him.

(ಗೊಂದಲ)

ಅಧ್ಯಕ್ಷರು.—ಅವರು ಉತ್ತರ ಕೊಡುವುದಕ್ಕೆ ಟೈಮ್ ಬೇಕು ಎಂದು ಕೇಳಿದ್ದರು.

(ಗೊಂದಲ)

ಸಭೆಯು ಮುಂದಿಡಲಾದ ಕಾಗದ ಪತ್ರಗಳು

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ಅನುಚ್ಛೇದ ೩೨೩ (೨)ರ ಮೇರೆಗೆ ಕರ್ನಾಟಕದ ಲೋಕಸೇವಾ ಆಯೋಗದ ೧೯೮೫-೮೬ನೇ ಇಸವಿಯ ವಾರ್ಷಿಕ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಗೆ ಒಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಗಜೇಂದ್ರಗಡ ನಗರಕ್ಕೆ ನೀರು ಸರಬರಾಜಿನ ಬಗ್ಗೆ ನಾನು ಸಭೆಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಶಿವಾನಂದ ಕೌಜಲಗಿ (ಅಧ್ಯಕ್ಷರು–ಹಕ್ಕುಬಾಧ್ಯತಾ ಸಮಿತಿ).—ಮಾನ್ಯ ಅಧ್ಯಕ್ಷರೇ, ನಾನು ಹಕ್ಕುಬಾಧ್ಯತಾ ಸಮಿತಿಯ ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಯಿತು.